ದಿನಾಂಕ 02-03-2022 ಅಸಲು ದಾವಾ ಸಂ.17/2021

ಪಿ.ಡಬ್ಲ್ಯೂ .-1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ.ಎ ಜೆ ವ್ಹಿ ವಕೀಲರಿಂದಃ-**</u>

ಆರು ರೂಲ್ಡ್ ಕಾರ್ಡನ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-6 ಎಂದು, ಎರಡು ಸಿಟಿ ಸರ್ವೆ ನಕ್ಷೆಯ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-7 ಮತ್ತು ನಿಪಿ-8 ಎಂದು, ಅಸಲು ದಾವಾ ನಂ.19/1981 ಇದರ ದೃಡೀಕೃತ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಆರ್ ಎ ನಂ.7/2002 ಇದರ ದೃಡೀಕೃತ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಆರ್ ಎಸ್ ಎ ನಂ.958/2005 ಇದರ ದೃಡೀಕೃತ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ಸಿವಿಲ್ ಅಪೀಲ್ ನಂ.8412/2019 ಇದರ ದೃಡೀಕೃತ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, ನನ್ನ ವಕೀಲರ ಮುಖಾಂತರ ಪ್ರತಿವಾದಿ ನಂ.3 ಮತ್ತು ಪೌರಾಯುಕ್ತರಿಗೆ ದಿನಾಂಕ 05-03-2020 ರಂದು ನೋಟೀಸ್ ನೀಡಿದ್ದು ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು, ನನ್ನ ವಕೀಲರ ಮುಖಾಂತರ ಪ್ರತಿವಾದಿ ನಂ.3 ರವರಿಗೆ ದಿನಾಂಕ 12-10-2020 ರಂದು ನೋಟೀಸ್ ನೀಡಿದ್ದು ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-14 ಎಂದು, ನನ್ನ ವಕೀಲರ ಮುಖಾಂತರ ಸಹಾಯಕ ನಿರ್ದೇಶಕರು, ನಗರಭೂಮಾಪನಾ ಇಲಾಖೆ ಇವರಿಗೆ ದಿನಾಂಕ 09-11-2020 ರಂದು ನೋಟೀಸ್ ನೀಡಿದ್ದು ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು, ಅಂಚೆ ಸ್ವೀಕೃತ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-16 ಎಂದು, ಪ್ರತಿವಾದಿ ನಂ.3 ಇವರು ನೋಟೀಸಗೆ ನೀಡಿದ ಪ್ರತ್ಯುತ್ತರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಮುಖ್ಯ ವಿಚಾರಣೆಯಲ್ಲಿ ಕೇಳಿದಂತೆ ದಾವೆಯನ್ನು ಡಿಕ್ರೀ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

<u>**ಪಾಟೀ ಸವಾಲು : ಪ್ರತಿವಾದಿ ನಂ.1 ಮತ್ತು 2 ರವರ ಪರ ಶ್ರೀ. ಡಿ ಎಂ ಜೆ ವಕೀಲರಿಂದ ಮತ್ತು ಪ್ರತಿವಾದಿ ನಂ.3 ರವರ ಪರ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-**</u>

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .